**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ.673/2015</u>**

ಪ್ರಾಸಾಃ4

ಚಾಸಾ.12

ಸಾಕ್ಷಿಯ ಹೆಸರುಃ ಉಮಾದೇವಿ

ಗಂಡ : ವೀರಭದ್ರಗೌಡ

ವಯಸ್ಸು : ಸುಮಾರು **38** ವರ್ಷ

ವೃತ್ತಿ : ಗೃಹಿಣಿ

ವಿಳಾಸ : ಮೈಲಿಗನೂರು ಗ್ರಾಮ, ಆದೋನಿ

<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u> <u>ದಿನಾಂಕಃ 13**.02.2024**</u>

<u>ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ</u>

1. 2015 ರಲ್ಲಿ ನಾನು ಪ್ರಯಾಣಿಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ ಅಪಘಾತ ಹೊಂದಿದ್ದು ಅದರಲ್ಲಿ ನನಗೆ ಮತ್ತು ಇತರ ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳು ಆಗಿದ್ದವು, ಅದೇ ರೀತಿ ಅಪಘಾತಕ್ಕೆ ಈಡಾದ ದ್ವಿ ಚಕ್ರ ವಾಹನ ಸವಾರ ಹಾಗೂ ಬೊಲೆರೊ ವಾಹನ ಸವಾರನಿಗೂ ಗಾಯಗಳಾಗಿದ್ದವು. ಸದರಿ ಅಪಘಾತ ಯಾರ ತಪ್ಪಿನಿಂದ ಮತ್ತು ಯಾರ ನಿರ್ಲಕ್ಷ್ಯತನದಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ಪ್ರಯಾಣ ಮಾಡುತ್ತಿರುವಾಗ ನಾನು ಮಲಗಿಕೊಂಡಿದ್ದೆ . ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಇದೇ ಮೊದಲ ಭಾರಿ ನೊಡುತ್ತಿದ್ದೇನೆ. ಈ ಕುರಿತು ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿರುತ್ತಾರೆ. ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಮಾನ್ಯ ಎಪಿಪಿ ಯವರು ಕೋರಿಕೆಯನ್ನು ಪರಿಗಣಿಸಿ ಪಾಟಿ ಸವಾಲಿಗೆ ಅವಕಾಶ ನೀಡಲಾಯಿತು)

<u>ಪಾಟಿ ಸವಾಲುಃ ಮಾನ್ಯ ಎಪಿಪಿ ಯವರಿಂದಃ</u>

3. ದಿಃ 18.02.2015 ರಂದು ಬೆಳಿಗ್ಗೆ 10.45 ಗಂಟೆಗೆ ನಾನು ಪ್ರಯಾಣಿಸುತ್ತಿದ್ದ ಬಸ್ ನಂ. ಕೆ 34 ಎಫ್ 0755 ನೇದ್ದನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಅತಿ ವೇಗ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು ಸಿಂದನೂರು ರಸ್ತೆಯಲ್ಲಿರುವ ವೆಲ್‌ಕಂ ಬೋರ್ಡ್ ಸಮೀಪ ಮೋಟಾರು ಸೈಕಲ್ ನಂ. ಕೆ ಎ 34 ಇ ಸಿ 0449 ನೇದ್ದಕ್ಕೆ ಡಿಕ್ಕಿ ಪಡಿಸಿ ನಂತರ ಬೊಲೆರೊ ವಾಹನಕ್ಕೆ ಡಿಕ್ಕಿ ಹೊಡಿಸಿ ಅಪಘಾತ ಪಡಿಸಿರುತ್ತಾನೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನೂತ್ತಾರೆ, ಸದರಿ ಅಪಘಾತ

**ಪ್ರಾಸಾಃ**4
**ಚಾಸಾ.**12

ಆರೋಪಿತನ ನಿರ್ಲಕ್ಷ್ಯತನ ದಿಂದ ಆಗಿರುತ್ತದೆ ಎಂದು ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ . ದಿಃ 18.02.2015 ರಂದು ಪೋಲೀಸರಿಗೆ ನೀಡಿದ ಹೇಳಿಕೆ ಭಾಗ ನಾನು ……… ರಕ್ತ ಗಾಯವಾಗಿರುತ್ತದೆ ಎಂಬ ಭಾಗವನ್ನು ಸಾಕ್ಷಿಗೆ ಓದಿ ಹೇಳಿ ಕೇಳಿದಾಗ ಸಾಕ್ಷಿ ನಿರಾಕರಿಸಿದ್ದು ಸದರಿ ಭಾಗವನ್ನು ನಿಪಿ.2 ಎಂದು ಗುರುತಿಸಲಾಯಿತು. ನಿಪಿ.2 ರಂತೆ ಪೋಲೀಸರಿಗೆ ಹೇಳಿಕೆ ನೀಡಿದ್ದರೂ ಕೂಡ ಅರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಇಲ್ಲ ಎಂದು ತಿಳಿಸುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**